(SRI H. SIDDAVEERAPPA).

Statement showing the Grants and Loans received from the Government of India for the Grow More Food Scheme for the years 1949-50, 1950-51 and 1951-52 and the expenditure incurred thereon.

	Grant	Expenditure	Remarks
	Rs.	Rs.	
1. Agricultural Department —			
(a) Service Schemes	21,99,184	21,54,678	Expenditure up to end of February 1952.
(b) Food Bonus Scheme	12,84,346	6,20,184	
2. Revenue Department	11,25,000	16,74,885	
3. Public Works Department	1,01,75,000	1,73,99,547	
4. Electrical Department	...	48,76,485	
Total ...	1,47,83,530	2,67,25,279	

ಶ್ರೀ ಎಂ. ಚಿಕ್ಕಲಿಂಗಯ್ಯನವರು.—(ಡಿ) ಮತ್ತು (ಇ) ಪ್ರಶ್ನೆಗಳಿಗೆ ಒದಗಿಸಿರುವ ಉತ್ತರಗಳ ಪ್ರಕಾರ ಇನ್ನು ಉಳಿಯತಕ್ಕ ಒಂದು ಲಕ್ಷ ಎಕರೆ ಜಮೀನು ವಜಾ ಆಗಿದೆಯೋ ಅಥವಾ ಹಾಗೆಯೇ ಇದೆಯೋ?

ಶ್ರೀ ಎಚ್. ಸಿದ್ದವೀರಪ್ಪನವರು.—ಅದಿನ್ನೂ ಸಾಗುವಳಿಗೆ ಬಂದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯನವರು.—ಹಾಗೆ ಜಮೀನನ್ನು ಸಾಗುವಳಿಗೆ ತಾರದಿರತಕ್ಕವರ ಮೇಲೆ ಸರ್ಕಾರದವರು ಏನು ಕ್ರಮ ಕೈಕೊಳ್ಳಬೇಕೆಂದಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಈವರೆಗೆ ಸಾಗುವಳಿಗೆ ಕೊಟ್ಟ ಜಮೀನುಗಳ ಹೆಚ್ಚಿಕೆ ಅನೇಕ ಜಮೀನನ್ನು ಸಾಗುವಳಿಗೆ ತರಲಾಗಿದೆ. ಹಾಗೆ ಸಾಗುವಳಿಗೆ ತಾರದಿರತಕ್ಕವರ ವಿಚಾರದಲ್ಲಿ ಮುಂದೇನು ಮಾಡಬೇಕೆಂಬುದನ್ನು ಸರ್ಕಾರದವರು ಆಲೋಚನೆಮಾಡುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯನವರು.—ಜಮೀನ್ದಾರರಲ್ಲದವರಿಗೆ ಜಮೀನು ಕೊಟ್ಟರೆ ಹೀಗಾಗುವುದಿಲ್ಲವೆಂಬುದನ್ನು ತಾವು ಅನುಮೋದಿಸುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪನವರು.—ಸಾಧ್ಯವಾದಷ್ಟು ಜಮೀನಿಲ್ಲದವರಿಗೆ ಜಮೀನನ್ನೊದಗಿಸಬೇಕೆಂಬುದೇ ಸರ್ಕಾರದವರ ಉದ್ದೇಶ.

Extent of land granted for cultivation.

Q.—69. **Sri B. N. BORANNA GOWDA** (Belur).—

Will the Government be pleased to State :—

(*a*) the extent of land that was granted for cultivation by the Revenue Minister in the previous Ministry ;

(*b*) out of this the extent of *gomal* land granted ;

(*c*) the extent of land granted to mutts and the names of those mutts ;

(*d*) the extent of land granted to persons in Government service and who they are ;

(*e*) the extent of land granted from tank beds and to whom it was granted ;

(*f*) the extent of land granted to non-agriculturists living in Bangalore and Mysore and who they are ;

(*g*) the extent granted to those that had studied in the Agricultural College and to the Graduates of other Colleges and who they are ;

(*h*) the extent of land granted to those that suffered in the struggle for Independence and who they are ?

A.—**Sri Kadidal MANJAPPA** (Minister for Revenue and Public Works).—

	A.	*G.*	
(*a*)	5,251	9	
(*b*)	1,236	34	
(*c*)	141	18	Detiails about grantees are being collected.
(*d*)	218	5	Do
(*e*)	491	16	Do
(*f*)	342	7	Do
(*g*)	104	0	Do
(*h*)	353	27	Do

ಶ್ರೀ ಬಿ. ಎಕ್. ಬೋರಣ್ಣಗೌಡರು.—(ಎ) ಪ್ರಶ್ನೆಗೆ ಉತ್ತರವಾಗಿ 5,251 ಎಕರೆಗಳೆಂದು ತಿಳಿಸೋಣವಾಗಿದೆ. ಇಷ್ಟೇ ಜಮೀನೋ ಅಥವಾ ಇನ್ನೂ ಹೆಚ್ಚಿಗೆ ಕೊಡರಾಗಿದೆಯೋ?

Sri Kadidal MANJAPPA.—With your permission I want to make a correction. The entire extent is granted by the Government.

ಶ್ರೀ ಬಿ. ಎಕ್. ಬೋರಣ್ಣಗೌಡರು.—ಗೋಮಾಳದಿಂದ ಸಾಗುವಳಿಗೆ ಜಮೀನು ಕೊಟ್ಟಿದೆಯೆಂದು ಉತ್ತರ ಕೊಟ್ಟಿದೆ. ಹಾಗೆ ಕೊಟ್ಟಿರುವ ಕಡೆ ಗೋಮಾಳ ಸಾಲದೆಂದು ಕೊಟ್ಟಿದೆಯೋ ಅಥವಾ ಹೆಚ್ಚು ಎಂದು ಕೊಟ್ಟಿದೆಯೋ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೆಚ್ಚಾಗಿದ್ದುದರಿಂದ ಕೊಡಲಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಹಳ್ಳಿಗಳು ಬೆಳೆಯುತ್ತವೆಂಬ ಉದ್ದೇಶದಿಂದ ತಾನೆ ಹೆಚ್ಚಾಗಿ ಗೋಮಾಳ ನಿಗದಿಮಾಡಿರುವುದು?

ಶ್ರೀ ಕಡಿದಾಳ್ ಮಂಜಪ್ಪನವರು.—ಅದನ್ನು ಗಮನಕ್ಕೆ ತೆಗೆದುಕೊಂಡೇ ಆ ಜಮೀನನ್ನು ಕೊಡಲಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಗೋಮಾಳವನ್ನು ಸಾಗಿಗೆ ಕೊಡುವಾಗ ಯಾವ ಯಾವ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗುವುದು?

ಶ್ರೀ ಕಡಿದಾಳ್ ಮಂಜಪ್ಪನವರು.—ಜಾನುವಾರುಗಳ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡು ಹೆಚ್ಚಾಗಿರುವುದನ್ನು ಕೊಡಲಾಗುವುದು.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಸರ್ಕಾರದವರು ನೂರು ರಾಸುಗಳಿಗೆ ಮೂವತ್ತು ಎಕರೆಗಳಿರಬೇಕೆಂದು ನಿಗದಿಮಾಡಿದ್ದಾರಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ನಿಗದಿಮಾಡಿದ್ದಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಹಾಗೆ ನಿಗದಿಮಾಡಿರುವುದಕ್ಕಿಂತ ಕಡಮೆಯಿರುವ ನಂದರ್ಭಗಳು ಗಮನಕ್ಕೆ ಬಂದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಎಲ್ಲಾದರೂ ಅಪ್ಪಿತಪ್ಪಿ ಕೆಲವು ವೇಳೆ ಸ್ಥಳೀಯ ಅಧಿಕಾರಿಗಳ ಲೋಪದಿಂದ ಹಾಗಾಗಿರಬಹುದು.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಆ ಲೋಪವನ್ನು, ಆ ರೀತಿ ಕೊಟ್ಟಿರುವುದನ್ನು ಗಮನಕ್ಕೆ ತಂದರೆ ಕೊಟ್ಟಿರುವುದನ್ನು ವಜಾಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದು ಸಮಯ ಸಂದರ್ಭಗಳ ಮೇಲೆ ಅವಲಂಬಿಸಿದೆ. ಯೋಚನೆಮಾಡುತ್ತೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—(ಸಿ) ಪ್ರಶ್ನೆಗೆ ಉತ್ತರವಾಗಿ 141 ಎಕರೆಗಳು 18 ಗುಂಟೆಗಳನ್ನು ಮಠಗಳಿಗಾಗಿ ಕೊಟ್ಟಿದೆಯೆಂದು ಹೇಳಿದೆ. ಯಾವ ಯಾವ ಮಠಗಳಿಗೆ ಎಂಬುದನ್ನು ಹೇಳಲಾಗುವುದೆ?

ಶ್ರೀ ಕಡಿದಾಳ್ ಮಂಜಪ್ಪನವರು.—ತಪಶೀಲು ಸಂಗ್ರಹಿಸಲಾಗುತ್ತಿದೆಯೆಂದು ಹೇಳಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಕೊಟ್ಟಿರುವುದಕ್ಕೆ ತಮ್ಮಲ್ಲಿ ದಾಖಲೆಯಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಆ ಬಗ್ಗೆ ವಿವರ ಬಂದಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಮಠಗಳಿಗೆ ಎಲ್ಲ ಜಮೀನು ಸಾಲದೋ ಅಲ್ಲಿ ಕೊಟ್ಟಿದೆಯೇ ಅಥವಾ ಸಾಕಾದಷ್ಟಿದ್ದರೂ ಹೆಚ್ಚಾಗಿ ಕೊಟ್ಟಿದೆಯೋ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೊಟ್ಟಿರುವಷ್ಟನ್ನು ಉತ್ತರದಲ್ಲಿ ತಿಳಿಸಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—(ಡಿ) ಪ್ರಶ್ನೆಗೆ ಉತ್ತರವಾಗಿ 218 ಎಕರೆ 5 ಗುಂಟೆ ಕೊಡಲಾಗಿದೆಯೆಂದು ಹೇಳಿದೆ. ಆ ರೀತಿ ಕೊಟ್ಟಿರುವುದು ಎಲ್ಲಿರುವವರೆಗೆ?

ಶ್ರೀ ಕಡಿದಾಳ್ ಮಂಜಪ್ಪನವರು.—ನಮಗೆ ವಿವರ ಬಂದಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಆ ರೀತಿಯಾಗಿ ಜಮೀನು ಪಡೆದಿರುವವರು ಬೆಂಗಳೂರಿನವರು ಮತ್ತು ಮೈಸೂರಿನವರು ಎಂಬುದನ್ನು ಒಪ್ಪುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೆಲವರು ಅಲ್ಲಿನವರಿರಬಹುದು,

ಶ್ರೀ ಬಿ. ಎಚ್. ಬೋರಣ್ಣಗೌಡರು.—ಕೆರೆ ಅಂಗಳಗಳಲ್ಲಿ 491 ಎಕರೆ 16 ಗುಂಟೆ ಕೊಟ್ಟಿದೆಯೆಂದು ಹೇಳಿದೆ. ಹಾಗೆ ಕೊಡುವ ಉದ್ದೇಶವೇನು?

ಶ್ರೀ ಕಡಿದಾಳ್ ಮಂಜಪ್ಪನವರು.—ಸಾಗುವಳಿ ಮಾಡಬೇಕೆಂಬುದು.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಸಾಗುವಳಿಗೆ ಖಾಯಮ್ಮಾಗಿ ಕೊಟ್ಟಿದೆಯೋ ಅಥವಾ ಹಂಗಾಮಿಯಾಗಿ ಕೊಟ್ಟಿದೆಯೋ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೆಲವು ನಂದರ್ಭಗಳಲ್ಲಿ ಖಾಯಮ್ಮಾಗಿ, ಮತ್ತೆ ಕೆಲವು ನಂದರ್ಭಗಳಲ್ಲಿ ಹಂಗಾಮಿಯಾಗಿ ಕೊಟ್ಟಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಕೆರೆ ಕಟ್ಟಿರುವ ಉದ್ದೇಶವೇನು?

ಶ್ರೀ ಕಡಿದಾಳ್ ಮಂಜಪ್ಪನವರು.—ನೀರು ನಿಲ್ಲಲಿ ಎಂದು.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಕೆರೆ ಅಂಗಳ ಸಾಗಿಗೆ ಕೊಟ್ಟರೆ ಆ ಉದ್ದೇಶ ಸಫಲವಾಗುತ್ತದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಉದ್ದೇಶ ಸಫಲವಾಗದಿದ್ದರೆ ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನೀರು ನಿಲ್ಲುವವರೆಗೆ ಸಾಗಿಗೆ ಕೊಡಬಹುದು.

ಶ್ರೀ ಬಿ. ಎಚ್. ಬೋರಣ್ಣಗೌಡರು.—(ಬಿ) ಪ್ರಶ್ನೆಗೆ ಉತ್ತರವಾಗಿ 342 ಎಕರೆ 7 ಗುಂಟೆ ಕೊಟ್ಟಿದೆಯೆಂದು ಹೇಳಿದೆ. ಯಾರಿಗೆ ಕೊಟ್ಟಿದೆ?

ಶ್ರೀ ಕಡಿದಾಳ್ ಮಂಜಪ್ಪನವರು.—ವಿವರ ಬಂದಿಲ್ಲವೆಂದು ಉತ್ತರದಲ್ಲೇ ಹೇಳಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ವಿವರ ಒದಗಿಸಲು ಎಷ್ಟು ದಿವಸಗಳು ಬೇಕು? ಖಚಿತವಾಗಿ ಹೇಳಲು ಸಾಧ್ಯವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಇನ್ನೂ ಸ್ವಲ್ಪ ಕಾಲ ಬೇಕು, ಕರಾರುವಾಕ್ಕಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ವ್ಯವಸಾಯದ ಕಾಲೇಜಿನಲ್ಲಿ ಓದಿ ತೇರ್ಗಡೆಹೊಂದಿರುವವರಲ್ಲಿ ಯಾರಾದರೂ ವ್ಯವಸಾಯಮಾಡಲು ಜಮೀನು ಕೊಡಿ ಎಂದು ಕೇಳಿದ್ದಾರೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಅವರ ಪೈಕಿ ಕೆಲವರಿದ್ದಾರೆ; ಅವರಿಗೆ ಕೊಟ್ಟಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಎಷ್ಟು ಕೊಟ್ಟಿದೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೊಟ್ಟಿರುವುದನ್ನು ಉತ್ತರದಲ್ಲಿ ನಮೂದು ಮಾಡಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಎಷ್ಟು ಜನರಿಗೆ ಕೊಟ್ಟಿದೆಯೆಂಬುದಕ್ಕೆ ವಿವರ ಹೇಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ವಿವರ ಬಂದಿಲ್ಲ

ಶ್ರೀ ಬಿ. ಎಚ್. ಬೋರಣ್ಣಗೌಡರು.—ವಿವರ ಎಷ್ಟು ದಿವಸಗಳಲ್ಲಿ ಬರಬಹುದು? ಕೊಟ್ಟಿರುವ 104 ಎಕರೆಗಳಿಗೆ ತಪಶೀಲು ಹೇಳಲು ಸಾಧ್ಯವಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಆ ದಷ್ಟು ಜಾಗ್ರತೆ ವಿವರವನ್ನು ತರಿಸುತ್ತೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಸ್ವಾತಂತ್ರ್ಯದ ಹೋರಾಟದಲ್ಲಿ ನೊಂದವರಿಗೆ ಕೊಟ್ಟಿರುವುದನ್ನು ಹೇಳಿದೆ. ಎಲ್ಲಿ ಕೊಟ್ಟಿರುವುದು?

ಶ್ರೀ ಕಡಿದಾಳ್ ಮಂಜಪ್ಪನವರು.—ಸಾಮಾನ್ಯವಾಗಿ ಎಲ್ಲಾ ಜಿಲ್ಲೆಗಳಲ್ಲಿ, ಈಗ ವಿವರ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಚ್. ಬೋರಣ್ಣಗೌಡರು.—ಸ್ವಾತಂತ್ರ್ಯದ ಹೋರಾಟದಲ್ಲಿ ನೊಂದವರಿಗೆ ಮುಫತ್ತಾಗಿ ಕೊಟ್ಟಿದೆಯೋ ಅಥವಾ ಅಪ್ಸೆಟ್ ಪ್ರೈಸ್‌ಗೆ ಕೊಟ್ಟಿದೆಯೋ?

ಶ್ರೀ ಕಡಿದಾಳ್ ಮಂಜಪ್ಪನವರು.—ಅವರಿಗೆ ಸರ್ಕಾರಿ ಆಜ್ಞೆಯ ಪ್ರಕಾರ ಮುಫತ್ತಾಗಿ ಕೊಟ್ಟಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಅವರಲ್ಲ ಇನ್ನೂ ಕೆಲವರಿಂದ ಅರ್ಜಿ ಬಂದಿಲ್ಲವೆಂಬುದು ಗೊತ್ತೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಈಗಲೂ ಅನೇಕರಿಂದ ಅರ್ಜಿ ಬರುತ್ತಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಅಂಥವರಿಂದ ಅರ್ಜಿ ಬಂದರೆ ಏನು ಮಾಡುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪನವರು.—ಈಗ ಅರ್ಜಿಗಳನ್ನು ಡೆಪ್ಯುಟಿ ಕಮಿಷನರಿಗೆ ಕಳುಹಿಸುತ್ತಿದ್ದೇವೆ. ಕೆಲವು ಸಂದರ್ಭಗಳಲ್ಲಿ ಸ್ವಾತಂತ್ರ್ಯದ ಹೋರಾಟದಲ್ಲಿ ನೊಂದವರಿಗೆ ಮತ್ತು ಹರಿಜನರಿಗೆ ಕೆಲವು ಜಮೀನುಗಳನ್ನು ವಿಶೇಷವಾಗಿ ಪ್ರಯತ್ನಮಾಡುತ್ತೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಅಂಥ ಅರ್ಜಿ ಬಂದರೆ ಡೆಪ್ಯುಟಿ ಕಮಿಷನರಿಗೆ ಕಳಿಸದೆ ಇಲ್ಲೇ ತೀರ್ಮಾನಮಾಡುವುದಕ್ಕೆ ಪ್ರಯತ್ನಿಸಿ ಇಂಥ ಕಡೆ ಕೊಡುತ್ತೇವೆಂದು ಖಚಿತವಾಗಿ ತಿಳಿಸಲು ಏರ್ಪಾಡು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಈಗ ಅನುಸರಿಸುತ್ತಿರುವ ನೀತಿಯ ಪ್ರಕಾರ ದರಖಾಸ್ತು ಬಂದರೆ ಅದನ್ನು ಡೆಪ್ಯುಟಿ ಕಮಿಷನರಿಗೆ ವಿಲೇವಾರಿಗಾಗಿ ಕಳುಹಿಸುತ್ತಿದ್ದೇವೆ.

ಶ್ರೀ ಪಿ. ಆರ್. ರಾಮಯ್ಯನವರು (ಬನಪನಗುಡಿ).—ಸ್ವಾತಂತ್ರ್ಯದ ಹೋರಾಟದಲ್ಲಿ ನೊಂದವರ ಹೆಸರುಗಳು ಸರ್ಕಾರದಲ್ಲಿ ರಿಜಿಸ್ಟರಾಗಿವೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು —ಇಲ್ಲ; ಮೊದಲು ಪೋಲೀಸ್ ಇಲಾಖೆಯಲ್ಲಿ ಇರುತ್ತಿತ್ತು.

ಶ್ರೀ ಪಿ. ಆರ್. ರಾಮಯ್ಯನವರು.—ಸ್ವಾತಂತ್ರ್ಯದ ಹೋರಾಟದಲ್ಲಿ ನೊಂದವರಿಗೆ ಜಮೀನು ಕೊಡಲು ಮದ್ರಾಸಿನಲ್ಲಿ ಒಂದು ಪದ್ಧತಿ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಮದ್ರಾಸಿನಲ್ಲಿ ಮಾಡುತ್ತಿರುವುದನ್ನು ನಾವು ಅನುಸರಿಸಬೇಕಾಗಿಲ್ಲ.

ಶ್ರೀ ಪಿ. ಆರ್. ರಾಮಯ್ಯನವರು.—ಅದು ತಮಗೆ ಗೊತ್ತಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಗೊತ್ತಿದೆ.

ಶ್ರೀ ಪಿ. ಆರ್. ರಾಮಯ್ಯನವರು.—ಅದನ್ನು ಅನುಸರಿಸುತ್ತಿರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಅನುಸರಿಸಬೇಕಾಗಿಲ್ಲ.

ಶ್ರೀ ಪಿ. ಮಸಿಯಪ್ಪನವರು (ಹಿರಿಯೂರು).—(b) ಪ್ರಶ್ನೆಗೆ ಉತ್ತರವಾಗಿ 1,236 ಎಕರೆ 34 ಗುಂಟೆ ಕೊಟ್ಟಿದೆಯೆಂದು ಹೇಳಿದೆ. ಒಂದು ಗ್ರಾಮದಲ್ಲಿ ಗೋಮಾಳ ಎಷ್ಟಿರಬೇಕು?

ಶ್ರೀ ಕಡಿದಾಳ್ ಮಂಜಪ್ಪನವರು.—ಅದು ಜಾನುವಾರುಗಳ ಸಂಖ್ಯೆಯನ್ನವಲಂಬಿಸಿರುತ್ತದೆ.

ಶ್ರೀ ಪಿ. ಮಸಿಯಪ್ಪನವರು.—ಗ್ರಾಮಗಳಲ್ಲಿ ಗೋಮಾಳ ಕ್ಲೇಟಿನ್ಯೂಯಸ್ ಪ್ಲಾಟ್ ಆಗಿರಬೇಕೆಂದು ನಿಯಮವಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಸಾಮಾನ್ಯವಾಗಿ ಸಾಕಾದಷ್ಟು ಜಮೀನಿರಬೇಕೆಂಬ ನಿಯಮವಿದೆ.

ಶ್ರೀ ಪಿ. ಮಸಿಯಪ್ಪನವರು.—ಹಾಗೆ ಕಂಟಿನ್ಯೂಯಸ್ ಆಗಿಲ್ಲದಿದ್ದರೆ ಗ್ರಾಮದಲ್ಲಿ ದೂರವಾಗಿ 25 ಎಕರೆ ಗಳ ಪ್ಲಾಟ್ ಇದ್ದರೆ ಅವನ್ನು ಹರಿಜನರಿಗೆ ಕೊಡುವ ಏರ್ಪಾಡು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಗೋಮಾಳ ಜಾಸ್ತಿಯಿದ್ದರೆ ಕೊಡುವುದಕ್ಕೆ ಯೋಚನೆಮಾಡುತ್ತೇವೆ.

ಶ್ರೀ ಪಿ. ಮಸಿಯಪ್ಪನವರು.—ಅಂಥ ಸಂದರ್ಭಗಳಲ್ಲಿ ಗ್ರಾಮಸ್ಥರ ಮಹಜರು ಮಗ್ಯೆರೆ ನಡೆಯಬೇಕಾದುದನ್ನು ಕಡ್ಡಾಯಮಾಡದೆ ಕೊಡಲು ಯೋಚನೆಮಾಡುತ್ತೀರಾ?

Sri Kadidal MANJAPPA.—That is a purely hypothetical question.

ಶ್ರೀ ಜಿ. ಎ. ತಿಮ್ಮಪ್ಪಗೌಡರು (ಅರಕಲಗೂಡು).—ಸ್ವಾತಂತ್ರ್ಯದ ಹೋರಾಟದಲ್ಲಿ ನೊಂದವರನ್ನು ಈಗ ಸಮಾಜದಿಂದ ಬಹಿಷ್ಕಾರ ಮಾಡಲಾಗಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡರು.—ಆದ್ದರಿಂದ ಅವರಿಗೆ ಜಮೀನಿಲ್ಲದಿದ್ದರೆ ಕೊಡುವುದು ನ್ಯಾಯ, ನೀತಿ ಅಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೊಟ್ಟಿದೆಯೆಂದು ಹೇಳಿದೆ.

ಶ್ರೀ ಜಿ. ಶಿವಪ್ಪನವರು (ಹೊಳಲ್ಕೆರೆ).—ಸ್ವಾತಂತ್ರ್ಯದ ಹೋರಾಟದಲ್ಲಿ ನೊಂದವರು ಯಾರೆಂದು ಕಂಡುಹಿಡಿಯುವುದಕ್ಕೆ ಒಂದು ನೀತಿಯಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದು ಎಲ್ಲರಿಗೂ ಗೊತ್ತಿರುವ ವಿಚಾರ. ಹಿಂದೆ ರಾಜಕೀಯ ಚಳುವಳಿಯಲ್ಲಿ ಭಾಗವಹಿಸಿ ನೊಂದು ಕಷ್ಟಪಟ್ಟಿರುವವರು.

ಶ್ರೀ ಜಿ. ಶಿವಪ್ಪನವರು.—ಜಮೀನು ಕೊಡಬೇಕಾದರೆ ತೆಗೆದುಕೊಳ್ಳುವವರು ವ್ಯವಸಾಯಗಾರರಾಗಿರಬೇಕೆಂಬ ನಿಯಮವನ್ನಿಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಆಗುವುದಿಲ್ಲ.

ಶ್ರೀ ಜಿ. ಶಿವಪ್ಪನವರು.—ಹಾಗಾದರೆ ಬೇರೆಯವರಿಗೆ ಕೊಟ್ಟರೆ 'ಅಬ್ಸೆಂಟಿ ಲ್ಯಾಂಡ್ ಲಾರ್ಡಿಸಂ'ಗೆ ಉತ್ತೇಜನ ಕೊಟ್ಟಂತಾಗುವುದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ನಾಲ್ಕೈದು ಎಕರೆ ಕೊಟ್ಟರೆ ಹಾಗೇನೂ ಆಗುವುದಿಲ್ಲ.

ಶ್ರೀ ಕೆ. ವಿ. ಬೈರೇಗೌಡರು (ಬೆಂಗಳೂರು ಉತ್ತರ).—ಸ್ವಾತಂತ್ರ್ಯದ ಹೋರಾಟದಲ್ಲಿ ನೊಂದವರಲ್ಲಿ ಸೆಕ್ರೆಟೇರಿಯಟ್ ನೌಕರರೂ ಸೇರುವುದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ಕೆ. ವಿ. ಬೈರೇಗೌಡರು.—ಜಕ್ಕೂರು ಗ್ರಾಮದಲ್ಲಿ ಸ್ವಾತಂತ್ರ್ಯದ ಹೋರಾಟದಲ್ಲಿ ನೊಂದಿಲ್ಲದಿರುವವರಿಗೆ ಸಹಾಯಮಾಡಿರುವುದು ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿಲ್ಲ.

ಶ್ರೀ ಕೆ. ವಿ. ಬೈರೇಗೌಡರು.—ಈ ರೀತಿಯಾಗಿರುವುದು ಗಮನಕ್ಕೆ ಬಂದರೆ ಕೊಟ್ಟಿರುವುದನ್ನು ವಜಾ ಮಾಡುತ್ತೀರಾ?

(ಉತ್ತರವಿಲ್ಲ)

ಶ್ರೀ ಜಿ. ಬನಪ್ಪನವರು (ಹೊಸದುರ್ಗ).—ಗೋಮಾಳ ಸಾಕಾದಷ್ಟಿಲ್ಲದಿದ್ದರೆ ಅಂಥ ಕಡೆ ವಿಲೇಮಾಡಲಾಗುತ್ತಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದಕ್ಕೆ ಉತ್ತರ ಹೇಳಿದೆ.

Sri M. PALANIYAPPAN (Ulsoor).—Sir, is there any Government Order inviting applications from political

sufferers for grant of lands and if so will the Government invite applications?

Sri Kadidal MANJAPPA—There is already a Government Order on this subject and we do not propose to invite fresh applications.

Sri M. PALANIYAPPAN.—Will the political sufferers in the town of Bangalore be given any facilities other than grant of land?

Sri Kadidal MANJAPPA.—There is no information that I am aware of.

Sri PALANIYAPPAN.—There are so many political sufferers who have not yet applied. Will the Government receive their applications? What are the facilities that Government are going to give to those people in the city of Bangalore apart from grant of land?

Mr. SPEAKER.—That you must study.

ಶ್ರೀ ಕೆ. ಪ್ರಭಾಕರ್‌ರವರು (ನೆಲಮಂಗಲ-ಅನುಸೂಚಿತ ಜಾತಿಗಳು) —ಗೋಮಾಳಕ್ಕೆ ಲಾಯಖ್ಖಾಗಿಲ್ಲದೇ ಇರುವುದನ್ನು ಸಾಗುವಳಿಗೆ ಕೊಡುವುದಕ್ಕೆ ಅಭ್ಯಂತರವಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಲಾಯಖ್ಖಾಗಿಲ್ಲದೇ ಇದ್ದರೆ ಕೊಡುವುದಕ್ಕೆ ಅಭ್ಯಂತರವಿಲ್ಲ.

ಶ್ರೀ ಕೆ. ಪ್ರಭಾಕರ್‌ರವರು.—ಮಂಜೂರಾಗಿರತಕ್ಕ 5,251 ಎಕರೆಯಲ್ಲಿ ಮಂಜೂರಾಗಿ ವಜಾ ಆಗಿರತಕ್ಕ ಲೆಕ್ಕವೂ ಸೇರಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು (ದಾವಣಗೆರೆ).—ತ್ಯಾಗಮಾಡಿದಂಥಾ ಜನರಿಗೆ ಜಮೀನು ಕೊಡಬೇಕೆಂದು ತೀರ್ಮಾನಮಾಡಿದ್ದೀರಲ್ಲ ಅದು ಎಲ್ಲರಿಗೂ ಅನ್ವಯಿಸುತ್ತದೆ ತಾನೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಎಲ್ಲರಿಗೂ ಅಲ್ಲ. ತ್ಯಾಗಮಾಡಿದವರಿಗೆ ಅನ್ವಯಿಸುತ್ತದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು.—ದಾವಣಗೆರೆಯಲ್ಲಿ ಹಳ್ಳೂರು ನಾಗಪ್ಪ ಎನ್ನುವವರು ತೀರಿಹೋದರು; ಅವರ ಹೆಂಡತಿ ಅರ್ಜಿ ಹಾಕಿದ್ದರು; ಅದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು.—ಈಗಲಾದರೂ ಅದನ್ನು ತರಿಸಿ ನೋಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಅರ್ಜಿ ಕೊಟ್ಟಿದ್ದರೆ ಪರಿಶೀಲನೆ ಮಾಡುತ್ತೇವೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು.—ಅರ್ಜಿ ಕೊಟ್ಟಿದೆ.

ಜನಾಬ್ ಜೆ. ಮಹಮದ್ ಇಮಾಂರವರು (ಬಿಗಳೂರು).—ಈ 5,251 ಎಕರೆ ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ? ರೆಕಾರ್ಡ್ ನೋಡಿ ಸಮಾಚಾರ ಕೊಟ್ಟಿದ್ದೀರಾ ಅಥವಾ ಅಂದಾಜಿನ ಮೇಲೆಯೋ?

ಶ್ರೀ ಕಡಿದಾಳ್ ಮಂಜಪ್ಪನವರು.—ನಮ್ಮಲ್ಲಿರತಕ್ಕ ರಿಜಿಸ್ಟರು ದಾಖಲೆ ಮೇಲೆ ಕೊಟ್ಟಿದ್ದೇವೆ.

ಜನಾಬ್ ಜೆ. ಮಹಮದ್ ಇಮಾಂರವರು.—ತಮ್ಮ ರಿಜಿಸ್ಟರುಗಳಲ್ಲಿ ಹೆಸರು ಇರುವುದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಡೆಪ್ಯುಟಿಕಮೀಷನರ ಆಫೀಸಿನಲ್ಲಿ ಇರುತ್ತದೆ. ಅವರು ಕಳುಹಿಸಿದ ಸಮಾಚಾರ ಕೊಟ್ಟಿದೆ.

ಜನಾಬ್ ಜೆ. ಮಹಮದ್ ಇಮಾಂರವರು.—ಈಗ ಕೊಟ್ಟಿರುವುದರಲ್ಲಿ ರಾಮನಗರದ ತಾಲ್ಲೂಕು ಮುಟ್ಟೇ ದೊಡ್ಡಿ ಗ್ರಾಮದ ನಂಜಪ್ಪನವರಿಗೆ 50 ಎಕರೆ ಕೊಟ್ಟಿರುವುದೂ ಸೇರಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಸೇರಿದೆ.

ಜನಾಬ್ ಜೆ. ಮಹಮದ್ ಇಮಾಂರವರು.—ಅದನ್ನು ಮಂಜೂರುಮಾಡಿದ್ದು ಯಾರು? ಸರ್ಕಾರದವರೇ ಅಥವಾ ಡೆಪ್ಯುಟಿಕಮೀಷನರೇ? Was it sanctioned by the Government on its own accord or was it sanctioned on the recommendation of the Deputy Commissioner?

Sri Kadidal MANJAPPA.—Mostly on the recommendation of the Deputy Commissioner and local officers.

ಜನಾಬ್ ಜೆ. ಮಹಮದ್ ಇಮಾಂರವರು.—ಸರ್ಕಾರದವರೇ ಕೊಟ್ಟರೂ ಸ್ಥಳೀಯ ಅಧಿಕಾರಿಗಳ ಶಿಫಾರಸಿನಮೇಲೆ ಕೊಟ್ಟಿರುತ್ತೀರಾ?

Sri Kadidal MANJAPPA.—On the recommandation of the local officers—the revenue and forest authorities—the land was granted.

ಜನಾಬ್ ಜೆ. ಮಹಮದ್ ಇಮಾಂರವರು.—ಅದನ್ನು ಕೊಟ್ಟು ಎಷ್ಟು ದಿವಸವಾಯಿತು?

Sri Kadidal MANJAPPA.—I think in the month of February or March.

Mr. SPEAKER.—There is an adjournment motion, probably relating to that.

ಜನಾಬ್ ಜೆ. ಮಹಮದ್ ಇಮಾಂರವರು.—ಅದಕ್ಕಿಂತ ಹಿಂದೆ ಜಮೀನು ಯಾರ ಸ್ವಾಧೀನದಲ್ಲಿತ್ತು ಎಂಬುದನ್ನು ಹೇಳುತ್ತೀರಾ?

Sri Kadidal MANJAPPA.—I do not think that will arise out of this question.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—(ಜಿ) ಪ್ರಶ್ನೆಗೆ ಉತ್ತರವಾಗಿ 104 ಎಕರೆ ಕೊಡಲಾಗಿದೆ ಎಂದು ಹೇಳಿದ್ದೀರಿ. ಅದರಲ್ಲಿ ಅಗ್ರಿಕಲ್ಚರಲ್ ಗ್ರಾಜ್ಯುಯೇಟ್ಸ್ ಎಷ್ಟು ಜನ?

ಕಡಿದಾಳ್ ಮಂಜಪ್ಪನವರು.—ವಿವರ ಬಂದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—(f)ನಲ್ಲಿ ನಾನ್-ಅಗ್ರಿಕಲ್ಚರಿಸ್ಟ್‌ಗಳಿಗೆ ಕೊಟ್ಟಿರುವುದು ಎಂದು ಹೇಳಿದ್ದೀರಿ. ಅವರು ಬೆಂಗಳೂರು, ಮೈಸೂರಿನವರು ತಾನೆ?

Mr. SPEAKER.—It is given in the written answer. It is said: Land granted to non-agriculturists living in Bangalore and Mysore. Why does the Ho'ble Member put that question again?

ಶ್ರೀ ಬಿ. ಹುಚ್ಚೇಗೌಡರು.—ಬೆಂಗಳೂರು, ಮೈಸೂರಿನವರು ಎಂದು ಗೊತ್ತು; ನಾನ್-ಅಗ್ರಿಕಲ್ಚರಿಸ್ಟ್ ಎಂದು ಗೊತ್ತು, ಅವರ ಹೆಸರು ಗೊತ್ತಿಲ್ಲ ಎಂದರೆ ಏನು ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪನವರು.—ಡೆಪ್ಯುಟಿಕಮೀಷನರವರ ಆಫೀಸಿನಿಂದ ಬರಬೇಕು; ಬಂದಕೂಡಲೇ ಕೊಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ಈಗ ತಾವು ಕೊಡದೇ ಇರುವ ವಿವರಗಳನ್ನು ಯಾವಾಗ ಕೊಡುವುದು ?

ಶ್ರೀ ಕಡಿದಾಳ್ ಮಂಜಪ್ಪನವರು.—We will give the information. ಹೆಸರು ಬರುವುದು ಸ್ವಲ್ಪ ತಡ ಆಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಯಾವಾಗ ಸಮಾಚಾರ ಕೊಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪನವರು.—ಸಾಧ್ಯವಾದಷ್ಟು ಜಾಗ್ರತೆ ಕೊಡುತ್ತೇವೆ.

ಶ್ರೀ ಟಿ. ಹನುಮಯ್ಯನವರು (ಹಿರಿಯೂರು—ಅನುಸೂಚಿತ ಜಾತಿಗಳು).—(ಬಿ) ಪ್ರಶ್ನೆಗೆ ಉತ್ತರವಾಗಿ 1,236 ಎಕರೆ ಗೋಮಾಳ ಕೊಟ್ಟಿದೆ ಎಂದು ಹೇಳಿದ್ದೀರಿ. 100 ರಾಸುಗಳಿಗೆ 30 ಎಕರೆಯಂತೆ ಗೊತ್ತು ಮಾಡರಾಗಿದೆ. ಅದೇ ತರಹ ಜನಗಳಿಗೂ ಕೂಡ ನಿಗದಿ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ಏನು ? ಹುಲ್ಲನ್ನೇ ! (ಸಭೆಯಲ್ಲಿ ನಗು !)

ಶ್ರೀ ಟಿ. ಹನುಮಯ್ಯನವರು.—ವ್ಯವಸಾಯುದ ಕೂಲಿಗಾರರಿಗೆ ಇಷ್ಟು ಜಮೀನು ಕೊಡಬೇಕೆಂದು ನಿಗದಿ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದನ್ನು ಯೋಚನೆಮಾಡುತ್ತೇವೆ.

ಶ್ರೀ ಟಿ. ಹನುಮಯ್ಯನವರು.—ಪ್ರತಿಯೊಂದು ಸಂಸಾರಕ್ಕೂ ಇಷ್ಟು ಜಮೀನು ಇರಬೇಕೆಂಬುದಾಗಿ ನಿಗದಿಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದನ್ನು ಯೋಚನೆಮಾಡುತ್ತಾ ಇದ್ದೇವೆ.

Sri R. ANANTARAMAN (Chamarajpet).—How many graduates have been given ?

Mr. SPEAKER.—That is already answered.

Sri R. ANANTARAMAN —Graduates of the Engineering College ?

Mr. SPEAKER.—The Hon'ble Minister wants notice.

ಶ್ರೀ ಆರ್. ಅನಂತರಾಮಣ್ ಅವರು.—ಅದರ ಜೊತೆಗೆ ಸಾಲವನ್ನೂ ಸಹ ಕೊಟ್ಟು ಸಹಾಯ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಆರ್. ಮುನಿಸ್ವಾಮಯ್ಯನವರು (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಬೆಂಗಳೂರು, ಮೈಸೂರಿನಲ್ಲರತಕ್ಕ ನಾನ್ ಅಗ್ರಿಕಲ್ಚರಿಸ್ಟ್‌ರುಗಳಿಗೆ 342 ಎಕರೆ ಜಮೀನು ಕೊಟ್ಟಿರುತ್ತೀರಿ. ಅವರಲ್ಲ ಅನೇಕರು ಮಾರಿಕೊಂಡಿರುತ್ತಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿಲ್ಲ.

Repair of Feeder Channel in Belgur.

Q.—141. **G. Sri BASAPPA** (Hosadurga).—

Will the Government be pleased to state :—

(*a*) since how long the people of Belgur in Hosadurga Taluk are urging for the repair of the feeder channel ;

(*b*) whether there was any provision made in the last year's budget ; if so, the amount ;

(*c*) whether the estimate has been prepared and sanctioned for this work ;

(*d*) if not, the reasons therefor ?

A.— **Sri Kadidal MANJAPPA** (Minister for Revenue and Public Works).—

(*a*) Since 1935.

(*b*) Yes ; Rs. 10,000

(*c*) Estimate is prepared for Rs. 36,700. It is not yet sanctioned.

(*d*) The estimate is under scrutiny

ಶ್ರೀ ಜಿ. ಬಸಪ್ಪನವರು.—ಕಳೆದ 17 ವರ್ಷಗಳಿಂದ ಈ ನಾಲೆಯನ್ನು ರಿಪೇರಿಮಾಡಿಸಿಕೊಡಬೇಕೆಂದು ಎಷ್ಟು ಸಾರಿ ಅರ್ಜಿಗಳು ಬಂದಿವೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಜಿ. ಬಸಪ್ಪನವರು.—ಈ ಕೆರೆಯಿಂದ ಎಷ್ಟು ಎಕರೆ ಅಚ್ಚುಕಟ್ಟು ಸಾಗು ಆಗುತ್ತಾ, ಇದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಜಿ. ಬಸಪ್ಪನವರು.—ಈ ಕೆರೆ ಒಂದು ವರ್ಷವೂ ತುಂಬದೇ ಪ್ರತಿ ವರ್ಷವೂ ರೆಪೇರ್ ಕೊಡಬೇಕೆಂದು ಕೇಳುತ್ತಾ, ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿಲ್ಲ.

ಶ್ರೀ ಜಿ. ಬಸಪ್ಪನವರು.—ಕಳೆದ ವರ್ಷ ಬಡ್ಜೆಟ್‌ನಲ್ಲಿ ಹಣ ಒದಗಿಸಿದ್ದರು. ಮಾಜಿ ಮರಾಮತ್ತು ನಡೆವರು ಆ ಸ್ಥಳಕ್ಕೆ ಬಂದಾಗ 'ಬಡ್ಜೆಟ್‌ನಲ್ಲಿ ಹಣ ಒದಗಿಸರಾಗಿದೆ ಆದ್ದರಿಂದ ಆ ಕೆಲಸ ಪ್ರಾರಂಭಮಾಡಬಹುದು' ಎಂದು ಎಕ್ಸಿಕ್ಯೂಟೀವ್ ಇಂಜಿನಿಯರಿಗೆ ತಿಳಿಸಿದ್ದುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಅಂದಾಜು ಮಂಜೂರಾಗಿರಲಿಲ್ಲ, ಆದ್ದರಿಂದ ಕೆಲಸ ಪ್ರಾರಂಭ ಮಾಡಲಿಲ್ಲ.

ಶ್ರೀ ಜಿ. ಬಸಪ್ಪನವರು.—ಈ ವರ್ಷ ಜಾಗ್ರತೆ ಮಂಜೂರುಮಾಡಿ ಕೆಲಸ ಪ್ರಾರಂಭಮಾಡಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಅಂದಾಜು ಪರಿಶೀಲನೆಯಲ್ಲಿದೆ.

ಶ್ರೀ ಜಿ. ಬಸಪ್ಪನವರು.—10 ಸಾವಿರ ರೂಪಾಯಿಗಳನ್ನು ಪುನಃ ಈ ವರ್ಷದ ಬಡ್ಜೆಟ್‌ನಲ್ಲಿ ಒದಗಿಸಲಾಗಿದೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಹೌದು.